# Sahitya School

Shidlaghatta Road, Near Shirusti Hospital, H Cross.

# ನಿಮ್ಮ ಮಗು ಬೆಳೆದಂತೆ ನೀವೂ ಬೆಳೆಯುತ್ತೀರಿ.

- **ನಿಮ್ಮ ನಿರೀಕ್ಷೆಗಳು ವಾಸ್ತವಿಕತೆಗೆ ಹತ್ತಿರವಿರಬೇಕು.** ನಿಮ್ಮ ನಿರೀಕ್ಷೆಗಳನ್ನು ಮಕ್ಕಳು ಈಡೇರಿಸುವುದಿಲ್ಲ ಎನಿಸಿದಾಗ ನಿಮಗೆ ನಿರಾಶೆ ಆಗುತ್ತದೆ. ಬಹುಶಃ ನಿಮ್ಮ ನಿರೀಕ್ಷೆಗಳೇ ತಪ್ಪಾಗಿರಬಹುದು. ಈ ವಿಷಯವಾಗಿ ನೀವು ಬೇರೆ ಪೋಷಕರೊಂದಿಗೆ ಅಥವಾ ಮಕ್ಕಳ ತಜ್ಞರೊಂದಿಗೆ ಚರ್ಚಿಸಿ. ನಿಮಗೆ ಸಹಾಯವಾಗಬಹುದು.
- **ಯಾವಾಗಲೂ 'ಇಲ್ಲ' ಎನ್ನುತಿರಬೇಡಿ.** ನಿಮ್ಮ ಸುತ್ತಲಿನ ಅನೇಕ ಸಂಗತಿಗಳಲ್ಲಿ ಹೊಸ ಅವಕಾಶಗಳು ಬೇಕಾದಷ್ಟಿವೆ. ಇದರಿಂದ ನೀವು ಮತ್ತು ನಿಮ್ಮ ಮಗು ಇಬ್ಬರೂ ನಿರಾಶೆ ಹೊಂದಬೇಕಿಲ್ಲ ಎಂಬುದು ತಿಳಿಯುತ್ತದೆ.
- **ಬದಲಾವಣೆ ಪೋಷಕರಿಗೂ ಅನ್ವಯಿಸುತ್ತದೆ.** ನಿಮ್ಮ ಮಗು ಬದಲಾದಂತೆ, ನೀವೂ ಸಹ ಕ್ರಮೇಣ ನಿಮ್ಮ ದೃಷ್ಟಿಕೋನವನ್ನು ಬದಲಾಯಿಸಬೇಕಾಗುತ್ತದೆ. ನಿಮ್ಮ ಮಗುವಿನೊಂದಿಗೆ ಹೇಗಿರಬೇಕು ಎಂಬುದನ್ನು ಸದಾ ಹೊಸದಾಗಿ ಆಲೋಚಿಸುತ್ತಿರಬೇಕು.
- **ಪ್ರತಿಯೊಂದು ಕ್ಷಣದಲ್ಲೂ ನಿಮ್ಮ ಸಂಬಂಧಗಳನ್ನು ಉತ್ತಮಗೊಳಿಸಲು ಪ್ರಯತ್ನಿಸಿ.** ನಿಮ್ಮ ಮಗು ಕಲಿಯುವ, ಶಿಸ್ತನ್ನು ರೂಢಿಸಿಕೊಳ್ಳುವ ಹಂತಗಳಲ್ಲಿ ಅವುಗಳನ್ನು ಪ್ರೇರೇಪಿಸಲು ಸಿಗುವ ಪ್ರತಿ ಕ್ಷಣದಲ್ಲೂ ಬಳಸಿಕೊಳ್ಳಿ.
- **ಮೃದು ಮನೋಭಾವದವರಾಗಿರಿ.** ನಾವು 'ಹಿರಿಯರು' ಎಂಬ ಮನೋಭಾವವನ್ನು ಸಡಿಲಗೊಳಿಸಿಕೊಳ್ಳುವುದು ಒಳ್ಳೆಯದು.

**Where Fun Meets Learning**